ಮೈಸೂರ ಗೆಜೆಟ.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ ಜುಲ್ಫೆ ತಾ॥ 12, ಸ್ಯ 1890.

ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೂಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ ಸಿವಿಲ್ ತರಫು.

ರೂಲ್ ಅಫ್ ಪ್ರಾಕ್ಟೀಸ್ ನಂ. 82.

ತಾರೀಖು 6ನೇ ಮೇ ಸ್ಯ 1890ನೇ ಈಸವಿ.

ಸ್ಯ 1888ನೇ ಈಸವಿ ನೊವೆಂಬರು 22ನೇ ತಾರೀಖಿನ 77ನೇ ನಂಬರು ರೂಲ್ ಅಫ್ ಪ್ರಾಕ್ಟೀಸಿಗೆ ಈ ಕೆಳಗೆ ಬರೆದಿರುವುದನ್ನು ಸೇರಿಸಿಕೊಳ್ಳತಕ್ಕದ್ದೆಂದು ಚೀಫ್ ಕೋರ್ಟ್ ಅಪ್ಪಣೆಯಾಗಿದೆ.

ಅಡ್ವೊಕೇಟರು ಅಥವಾ ಪ್ಲೀಡರು ಖುದ್ದಾಗಿ ಹಾಜರಾಗಬೇಕೆಂದು ಜಡ್ಜರವರು ಅಪ್ಪಣೇ ಮಾಡಿದ್ದರೆ ಅಂಥಾ ಸಂದರ್ಭದಲ್ಲಿ ಹೊರತು, ಉಳಿದ ಕಾಲದಲ್ಲಿ ರೆಜಿಸ್ಟ್ರರಿಗೆ ದಾಖಲಾಗಿರುವ ಗುಮಾಸ್ತರು ಭತ್ಯವನ್ನೂ ಪ್ರೊಸೆಸ್ ಫೀಯನ್ನೂ ಕೊಡಬಹುದು; ಜಡ್ಜ್‌ಮೆಂಟು ಮತ್ತು ಡಿಕ್ರಿಯ ಕಾಪಿಗಳನ್ನೂ, ದಾಖಲ್ಮಾಡಿದ್ದ ದಸ್ತ್ಯೆವಜುಗಳನ್ನೂ ತೆಗೆದು ಕೊಳ್ಳಬಹುದು.

ಒಬ್ಬ ಅಡ್ವೊಕೇಟ್ ಅಥವಾ ಪ್ಲೀಡರು ನಡಿಸಿದ ಮೊಕದ್ದಮೆಯಲ್ಲಿ ದಾಖಲ್ಮಾಡಿದ್ದ ಜಡ್ಜ್‌ಮೆಂಟು, ಡಿಕ್ರಿ, ಅಥವಾ ದಸ್ತ್ಯೆವಜನ್ನು ವಾಪಸು ಕೊಡಿಸಬೇಕೆಂದು ಖಾಯಿಷ್ ಮಾಡಿದಾಗ, ಅವರು ಹೊಸ ವಕಾಲತ್ ನಾಮೆಯನ್ನು ದಾಖಲ್ಮಾಡತಕ್ಕ ಅಗತ್ಯವಿಲ್ಲ.

ಕೋರ್ಟು ಅಪ್ಪಣೇ ಮೇರೆ

ಯಸ್. ಹೇಮಾಜಿರಾವ್,

ರೆಜಿಸ್ಟ್ರಾರ್.

ಫಾರೆಸ್ಟ್ ಇಲಾಖೆ.

ಶುದ್ಧಾಶುದ್ಧ ಪತ್ರಿಕೆ.

ತಾರೀಖು 17ನೇ ಮೇ 1890.

1888ನೇ ಇಸವಿ ಜೂಲೈ ತಾರೀಖು 30ನೇ ನಂಬರು 26ನೇ ಮೈಸೂರು ಗೆಜೆಟ್ 2ನೇ ಭಾಗ ಪುಟ 233ನೇ ಫಾರೆಸ್ಟ್ ಇಲಾಖೆ ನೋಟಿಫಿಕೇಷನ್‌ನಲ್ಲಿ ಶಂಕರ ಸ್ಟೇಟ್ ಫಾರೆಸ್ಟಿನ ಉತ್ತರದ ಗಡಿಯಲ್ಲಿ 4—5ನೇ ಪಂಗತಿಗಳಲ್ಲಿ ಇರುವ ಚಿಟ್ಟಿಪ್ಪಾಳಗ್ರಾಮದ 61ನೇ ಸರ್ವೆ ನಂಬರು ಬಂದು ಸಂಣ ತುಂಡನ್ನು ಕರ್ಕೆ ಚನ್ನಹಳ್ಳಿ ಗ್ರಾಮದ 50ನೇ ಸರ್ವೆ ನಂಬರಿನಲ್ಲಿ ಇರುವ ನರಸೀಪುರ ಕೆರೆಗೆ ಬಂದು ಕೂಡುತ್ತದೆ ಯಂಬುವದಕ್ಕೆ ಬದಲಾಗಿ ಚಿಟ್ಟಿಪ್ಪಾಳ ಸರ್ವೆ ನಂಬರು 61 ಮುಂಜಿ) ಕೊಪ್ಪದ ಸರ್ವೆ ನಂಬರು 26 ಮತ್ತು ಇಟ್ಟಿಗೆಹಳ್ಳಿ ಸರ್ವೆ ನಂಬರು 42 ಈ ಗಡಿಗಳ 3 ಬಾಂದುಗಳಿಗೆ ಹೋಗಿ ಇಟ್ಟಿಗೆಹಳ್ಳಿ 42ನೇ ಸರ್ವೆ ನಂಬರು ದಾಟಿ ಚೆನ್ನಹಳ್ಳಿ ಇಟ್ಟಿಗೆಹಳ್ಳಿ ಗಡಿಯಾ ಬಾಂದಿನಿಂದ ಸುಮಾರು 1 ಫರ್ಲಾಂಗ್ ದೂರದಲ್ಲಿ ಕೂಡುತ್ತದೆ ಯೆಂದು ನೋದಿಕೊಳ್ಳತಕ್ಕದ್ದು. ಪೂರ್ವದ ಗಡಿಯಲ್ಲಿ ಮೇಲೆ ಕಂಡ ನರಸೀಪುರದ ಕೆರೆಯಿಂದ ಯಂಬುವದಕ್ಕೆ ಬದಲಾಗಿ ಮೇಲೆ ಕಂಡ ಇಟ್ಟಿಗೆಹಳ್ಳಿ ಗ್ರಾಮದ ಸರ್ವೆ ನಂಬರು 42ರಲ್ಲಿ ಉತ್ತರದ ಗಡಿ ಆಖೈರಾದ ಸ್ಥಳದಿಂದ ಯಂದು ನೋದಿಕೊಳ್ಳತಕ್ಕದ್ದು.

ಎಲ್. ರಿಕ್ಕೆಟ್ಸ್,

ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.